ಎಲ್ಲಾ ನೀರಾವರಿ ಪಂಪುಸೆಟ್ಟುಗಳ ಅರ್ಜಿದಾರರಿಗೂ ಆದೇ ವರ್ಷವೇ ವಿದ್ಯುತ್ ಸಂಪರ್ಕ ನೀಡುವುದು ಕಷ್ಟ ಸಾಧ್ಯ.

ಇ) 'ಆ' ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಉತ್ಪಾದನೆ ಬಗ್ಗೆ.

1452 ಶ್ರೀ ಎಂ. ನಾರಾಯಣಸ್ವಾಮಿ, (ಬೇತಮಂಗಲ):- ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದ ವಿದ್ಯುತ್ ಉತ್ಪಾದನೆ ಪ್ರಮಾಣವೆಷ್ಟು?

ಆ) ಈ ಪೈಕಿ ಗ್ರಾಮಾಂತರ ಪ್ರದೇಶಕ್ಕೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಆಗುತ್ತಿದೆ, ವಿಶೇಷವಾಗಿ ವ್ಯವಸಾಯಕ್ಕೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಆಗುತ್ತಿದೆ.

ಇ) ಈ ಪೈಕಿ ನಗರ ಪ್ರದೇಶಗಳಿಗೆ ಎಷ್ಟು ವಿದ್ಯುಚ್ಛಕ್ತಿ ಸರಬರಾಜು ಆಗುತ್ತಿದೆ;

ಈ) ಕೈಗಾರಿಕೆಗಳಿಗೆ ಎಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗುತ್ತಿದೆ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು):-

ಅ) ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ 1989-90ನೇ ಸಾಲಿನಲ್ಲಿ 11.211 ದಶಲಕ್ಷ ಯೂನಿಟ್‌ಗಳಷ್ಟು (ತಾತ್ಕಾಲಿಕ) ವಿದ್ಯುತ್ ಅನ್ನು ಉತ್ಪಾದಿಸಲಾಯಿತು.

ಆ) ಈ ಪೈಕಿ ಶೇ. 15.51ರಷ್ಟನ್ನು ಗ್ರಾಮಾಂತರ ಪ್ರದೇಶಗಳಿಗೆ ಸರಬರಾಜು ಮಾಡಲಾಯಿತು. ಇದರಲ್ಲಿ ನೀರಾವರಿ ಪಂಪುಸೆಟ್ಟುಗಳಿಂದ ಬಳಕೆಯಾದ ವಿದ್ಯುತ್ತಿನ ಪ್ರಮಾಣ ಶೇ.28.63 ರಷ್ಟಿದ್ದಿತು..

ಇ) ನಗರ ಪ್ರದೇಶಗಳಿಗೆ ಸರಬರಾಜಾದ ವಿದ್ಯುತ್ತಿನ ಪ್ರಮಾಣ ಶೇ. 64.49.

ಈ) ನಗರ ಪ್ರದೇಶಗಳಿಂದ ಸರಬರಾಜು ಮಾಡಿದ ಶೇ. 64.49ರ ಪೈಕಿ ಕೈಗಾರಿಕೆಗಳಿಗೆ (ಎಲ್.ಟಿ. ಮತ್ತು ಹೆಚ್.ಟಿ. ಎರಡೂ ಸೇರಿ) ಸರಬರಾಜಾದ ವಿದ್ಯುತ್ತಿನ ಪ್ರಮಾಣ ಶೇ. 51.56 ರಷ್ಟಿದ್ದಿತು.

ಅರಸೀಕೆರೆ ತಾಲ್ಲೂಕ್ ಮಂಗಳಾಪುರದ ತಾಮ್ರದ ಗಣಿಯ ಬಗ್ಗೆ.

1681 ಶ್ರೀ ಜಿ. ಶಿವರಾಮು (ಗಂಡಸಿ):- ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ!

ಅ) ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕು ಗಂಡಸಿ ಹೋಬಳಿಯ ಮಂಗಳಾಪುರದಲ್ಲಿರುವ ತಾಮ್ರದ ಗಣಿಯ ಪರಿಸ್ಥಿತಿ ಏನು;

ಆ) ಈ ಗಣಿಗೆ ಖರ್ಚಾಗಿರುವ ಮೊತ್ತವೆಷ್ಟು;

ಇ) ಮುಂದೆ ಈ ಗಣಿಯ ಬಗ್ಗೆ ಹಾಕಿಕೊಂಡಿರುವ ಯೋಜನೆ ಏನು;

ಈ) ಅರಸೀಕೆರೆ ತಾಲ್ಲೂಕ್ ಗಂಡಸಿ ಹೋಬಳಿ ಆಲದ ಹಳ್ಳಿ ಕ್ರೋಮೈಟ್ ಗಣಿ ಪ್ರಾರಂಭವಾಗಿ ಎಷ್ಟು ವರ್ಷವಾಯಿತು;

ಉ) ಸರ್ಕಾರ ಗಣಿಗೆ ವಶಪಡಿಸಿಕೊಂಡಿರುವ ಭೂಮಿಗೆ ಪ್ರತಿ ಎಕರೆಗೆ ಕೊಟ್ಟಿರುವ ಪರಿಹಾರ ನನವೆಷ್ಟು;

ಊ) ಹೆಚ್ಚು ಉತ್ಪಾದನೆಗೆ ಏನಾದರು ತಾಂತ್ರಿಕ ಸಲಕರಣೆಗಳನ್ನೂ ಅಳವಡಿಸುವ ಆಲೋಚನೆ ಇದೆಯೆ?